# ನೇರ ಪ್ರಸಾರ ಕಾರ್ಯಕ್ರಮ ಮತ್ತು ಚಿಕ್ಕ ವಿರಾಮ

■ ಶ್ರೀನಿವಾಸ್ ಜೋಕಟ್ಟೆ

ಮತ್ಸ್ಯಗಂಧ ರೈಲನ್ನು ಸುರತ್ಕಲ್ ಸ್ಟೇಷನ್‌ನಲ್ಲಿ ಹತ್ತಿದ ಅರವಿಂದ ಮತ್ತು ಪ್ರಿಯಾಂಕಾ ತಮ್ಮ ಸೀಟುಗಳಲ್ಲಿ ಕುಳಿತ ನಂತರ ನೆಮ್ಮದಿಯ ಉಸಿರೊಂದನ್ನು ಬಿಟ್ಟರು. ಈ ಬಾರಿ ಮುಂಬಯಿಗೆ ರೈಲು ಹತ್ತಲು ಮಂಗಳೂರು ಬದಲಿಗೆ ಸುರತ್ಕಲ್‌ನ್ನು ಆಯ್ಕೆ ಮಾಡಿದ್ದರು. ಮನೆಯಿಂದ ಹೊರಡುವಾಗಲೇ ತಡ ಆಗಿತ್ತು. ಎಲ್ಲಿ ರೈಲು ತಪ್ಪಿ ಹೋಗುವುದೋ ಎಂಬ ಭಯ ದಾರಿಯುದ್ದಕ್ಕೂ ಕಾಡಿತ್ತು. ರಿಕ್ಷಾದವ ವೇಗ ಹೆಚ್ಚಿಸಿ ವಾಹನ ಚಲಾಯಿಸಿದ್ದ.

‘ನಾವು ಸ್ಟೇಷನ್‌ಗೆ ಮುಂಚಿತವಾಗಿ ಬಂದು ಕಾದರೂ ಪರವಾಗಿಲ್ಲ. ತಡವಾಗಿ ಹೊರಟರೆ ತಲುಪುವ ತನಕ ಭಯ, ಗೊಂದಲ ಕಾಡುತ್ತಿರುತ್ತದೆ. ಈ ತೆಂಗಿನಕಾಯಿ, ತೆಂಗಿನ ಎಣ್ಣೆ, ಅಕ್ಕಿಯ ಚೀಲ ಇವೆಲ್ಲಾ ನಿನ್ನೆನೇ ಪ್ಯಾಕ್ ಮಾಡಬೇಕಾಗಿತ್ತು. ಎಷ್ಟೇ ಬೇಡವೆಂದು ಹೇಳಿದರೂ ಎಲ್ಲಿ ನಿನ್ನಮ್ಮ ಕೇಳುತ್ತಾರೆ..? ಎಲ್ಲಾ ಮನೆಯದೇ ಉತ್ಪತ್ತಿ ಎಂದು ಒತ್ತಾಯ ಮಾಡಿ ನಮ್ಮ ಗಂಟುಮೂಟೆ ಪ್ರತೀಬಾರಿ ಹೆಚ್ಚು ಮಾಡುತ್ತಾರೆ...’ ರಿಕ್ಷಾದಲ್ಲಿ ಅರವಿಂದ ಪತ್ನಿಯ ಎದುರು ಗೊಣಗುಟ್ಟುತ್ತಿದ್ದರೂ ಪ್ರಿಯಾಂಕಾ ಮೌನವೇ ಇದ್ದಳು.

ಈ ಬಾರಿ ಮುಂಬಯಿಗೆ ಹವಾನಿಯಂತ್ರಿತ ತ್ರಿಟಯರ್ ಬೋಗಿಯಲ್ಲಿ ಸೀಟು ಮಾಡಿದ್ದರಿಂದ ಮುಂಬಯಿಯಿಂದ ಊರಿಗೆ ಬರುವಾಗ ಎದುರಿಸಿದ್ದ ಕಿರಿಕಿರಿ ಇರಲಿಲ್ಲ. ಬರುವಾಗ ಸೀಟು ಸಿಕ್ಕಿದ್ದರೂ ಅನೇಕ ಪ್ರಯಾಣಿಕರು ಯಾರ್‍ಯಾರ ಸೀಟುಗಳಲ್ಲಿ ಕೂತು ಕಿರಿಕಿರಿ ಹುಟ್ಟಿಸಿದ್ದರಿಂದ ಹೊರಡುವಾಗ ಹವಾನಿಯಂತ್ರಿತ ಬೋಗಿಯಲ್ಲೇ ಸೀಟು ರಿಸರ್ವ್ ಮಾಡಿಸಿಕೊಂಡಿದ್ದ ಅರವಿಂದ.

ರೈಲು ಐದು ನಿಮಿಷ ತಡವಾಗಿಯೇ ಫ್ಲ್ಯಾಟ್‌ಫಾರ್ಮ್‌ಗೆ ಬಂದಿತು. ಇಬ್ಬರೂ ಹತ್ತಿ ತಮ್ಮ ಸೀಟಲ್ಲಿ ಕುಳಿತರು. ಇನ್ನು ಮುಂಬಯಿ ತಲುಪುವ ತನಕ ಟೆನ್ಶನ್ ಇಲ್ಲವೆಂದು ಇಬ್ಬರಿಗೂ ನೆಮ್ಮದಿಯಾಯಿತು. ಈ ಸಲ ಸ್ವಲ್ಪ ಲಗೇಜ್ ಹೆಚ್ಚಿಗೇನೆ ಇತ್ತು. ಪ್ರಿಯಾಂಕಾಳ ಅಮ್ಮನ ಮನೆಯಲ್ಲಿ ಒಂದಷ್ಟು ತೆಂಗಿನಕಾಯಿ, ಅಕ್ಕಿ, ತುಪ್ಪ... ಎಂದೆಲ್ಲಾ ನೀಡಿದ್ದರೆ, ಇತ್ತ ಅರವಿಂದನ ಅಮ್ಮನೂ ಒಂದಷ್ಟು ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಮಸಾಲೆ ಪುಡಿಗಳು ಎಂದೆಲ್ಲಾ ಇನ್ನೊಂದಿಷ್ಟು ಹೊರೆ ನೀಡಿದ್ದರಿಂದ ಎರಡು ಪಟ್ಟು ಲಗೇಜ್ ಹೊತ್ತುಕೊಳ್ಳುವ ಸ್ಥಿತಿ ಬಂದಿತ್ತು.

ಅರವಿಂದ ಹಲವು ವರ್ಷಗಳಿಂದ ಮುಂಬಯಿಯಲ್ಲಿದ್ದಾನೆ. ಕಳೆದ ವರ್ಷವಷ್ಟೇ ಪ್ರಿಯಾಂಕಾಳನ್ನು ವರಿಸಿ ದಾಂಪತ್ಯದ ಬದುಕಿಗೆ ಕಾಲಿಟ್ಟಿದ್ದ. ತಾನು ಒಬ್ಬಂಟಿಯಾಗಿದ್ದಾಗ ಮುಂಬಯಿಯಿಂದ ಊರಿಗೆ ಹೋಗುವಾಗ ತೊಂದರೆ ತಾಪತ್ರಯಗಳಿಲ್ಲದೆ ಸರಾಗವಾಗಿ ಪ್ರಯಾಣಿಸುತ್ತಿದ್ದ. ಆದರೆ ಈಗ ಹೆಂಡತಿ ಜೊತೆ ಹೊರಡುವುದು, ಪ್ರಯಾಣಿಸುವುದು ಅಂದರೆ ಹಿಂದಿನ ಆ ಸ್ವಾತಂತ್ರ್ಯವೂ ಸಿಗುತ್ತಿರಲಿಲ್ಲ. ಊರಿಗೆ ಹೊರಡುವ ಬ್ಯಾಗ್ ಪ್ಯಾಕ್ ಮಾಡುವಾಗಲೇ ಪ್ರಿಯಾಂಕಾಳಿಗೂ ಅರವಿಂದನಿಗೂ ಸ್ವಲ್ಪ ಚರ್ಚೆಗಳಾಗಿದ್ದವು. ‘ಹಣ ಅದರಲ್ಲಿಡಿ. ನನ್ನ ವ್ಯಾನಿಟಿ ಬ್ಯಾಗ್, ಪೌಚ್ ಇದರಲ್ಲಿಡಿ, ನೀವು ಬ್ರಾಂಡೆಡ್ ಶರ್ಟ್‌ಗಳನ್ನೇ ಹಾಕಬೇಕು...’ ಎಂದೆಲ್ಲಾ ತಕರಾರು ಮಾಡುತ್ತಿದ್ದಳು. ಎಷ್ಟೇ ವಾದ ಮಾಡಿದರೂ ಅವಳು ತನ್ನನ್ನು ಚೆನ್ನಾಗಿ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆಂದು ಅರವಿಂದನೂ ಹೊಂದಾಣಿಕೆ ಮಾಡಿಕೊಂಡಿದ್ದಾನೆ. ವಿವಾಹದ ಬಳಿಕ ಮೊದಲಿನ ಹಾಗೆ ರೈಲ್ವೇ ಸ್ಟೇಷನ್ ತನಕ ತನ್ನ ಗೆಳೆಯರು ಬಂದು ಬಿಡುವುದು ನಿಂತಿತ್ತು...

ರೈಲೊಳಗೆ ಕುಳಿತು ಸ್ವಲ್ಪ ಹೊತ್ತಿನ ಬಳಿಕ ಪ್ರಿಯಾಂಕಾ ಪತ್ರಿಕೆಯೊಂದನ್ನು

